**Q.P. Code – 51601**

**ಪ್ರಥಮ ಬಿ.ಬಿ.ಎಂ. ಪದವಿ ಪರೀಕ್ಷೆ**
**ಸೆಪ್ಟೆಂಬರ್/ಅಕ್ಟೋಬರ್ 2013**
**(ದೂರ ಶಿಕ್ಷಣ)**

**ಕನ್ನಡ ಭಾಷಾ ಪತ್ರಿಕೆ – ೧**

**(DBA 010) – ಪಠ್ಯಗಳು : ಪ್ರಾಚೀನ ಕನ್ನಡ ಕಾವ್ಯ – ೨, ಹೊಸಗನ್ನಡ ಕಾವ್ಯ – ೨, ಹೊಸಗನ್ನಡ ಕಥಾ ಸಾಹಿತ್ಯ – ೧, ಹೊಸಗನ್ನಡ ಪ್ರಬಂಧ ಸಾಹಿತ್ಯ – ೧ ಬಳಕೆಯ ಭಾಷೆ**

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 70/80*

1. (ಅ) **ಒಂದರ** ಭಾವ ಸ್ವಾರಸ್ಯವನ್ನು ವಿವರಿಸಿ : **4**

(೧) ನೀನುಳ್ಳೊಡುಂಟು ರಾಜ್ಯಂ
ನೀನುಳ್ಳೊಡೆ ಪಟ್ಟಮುಂಟು ಬೆಳ್ಗೊಡೆಯುಂಟಯ್
ನೀನುಳ್ಳೊಡುಂಟು ಪೀಟಿಗೆ
ನೀನಿಲ್ಲದಿವೆಲ್ಲ ಮೊಳವೆ ಅಂಗಾಧಿಪತೀ

(೨) ಗಿಡಗಂಟೆಯಾ ಕೊರಲೊಳಗಿಂದ
ಹಕ್ಕಿಗಳಾ ಹಾಡು
ಹೊರಟಿತು ಹಕ್ಕಿಗಳಾ ಹಾಡು
ಗಂಧರ್ವರಾ ಸೀಮೆಯಾಯಿತು
ಕಾಡಿನಾ ನಾಡು
ಕ್ಷಣದೊಳು ಕಾಡಿನಾ ನಾಡು

(ಆ) **ಎಂಟು** ಪದಗಳಿಗೆ ಅರ್ಥ ಬರೆಯಿರಿ : **4**

ಗಡು, ವ್ಯಾಘ್ರ, ಗೇಹ, ಕೈದು, ಲಗ್ಗೆ, ಪೊಗರು, ಕೇತನ, ಅನ್ರತ, ಚಾಗ, ಅಸು.

(ಇ) **ಎರಡು** ವಿಷಯಕ್ಕೆ ಟಿಪ್ಪಣಿ ಬರೆಯಿರಿ : **4**

ಚಂಡಕರ್ಮ, ಸಂಬಳಿಗೋಲು, ಕುರುಬಗೌಡ.

2. **ನಾಲ್ಕಕ್ಕೆ** ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ : **12**

(೧) ಮನಬಂದುದ ಬಯಿಸಿ ಬೇವುತ್ತಿದ್ದೆನಯ್ಯಾ
(೨) ನಿರ್ಮಲ ಧರ್ಮದಿಂದೆ ಪಾಲಿಸು ಧರೆಯಂ
(೩) ನೀಂ ಕ್ರಮವಿಪರ್ಯಯಂ ಮಾಡುವುದೇ
(೪) ಸಿಂಹ ದುರ್ಗವು ಕೈಸೇರ್ದುದು; ಹಾ
ಮಾಯವಾದುದಿ ಸಿಂಹವು!
(೫) ಚಂದಮಾಮನ ಅಳಿಯ, ಬೆಕ್ಕು ನಾಯಿಯ ಗೆಳೆಯ
(೬) ಸಾಬರು ಯಾಕೊ ರಂಗೋಲಿ ಇಡೊಲ್ಲ!

3. (೧) ದುರ್ಯೋಧನನ ವಿಲಾಪದಲ್ಲಿ ಕರ್ಣ–ದುರ್ಯೋಧನರ ಸ್ನೇಹ ವ್ಯಕ್ತವಾದ ಬಗೆಯನ್ನು ವಿವರಿಸಿ. **8**

ಅಥವಾ

(೨) ದೇವಿಯ ಜಾತ್ರೆಯ ಹಿಂಸಾ ಸ್ವರೂಪವನ್ನು ವಿವರಿಸಿ.

4. (೧) ಆಧುನಿಕ ವಿಚಾರಗಳುಳ್ಳ ಒಬ್ಬ ಪ್ರಾಮಾಣಿಕ ತನ್ನ ಅವ್ವನ ಬಗ್ಗೆ ಹೊಂದಿರುವ ಭಾವನೆಗಳು ಅವ್ವ – ೨ ಕವನದಲ್ಲಿ ಹೇಗೆ ಅಭಿವ್ಯಕ್ತಿಗೊಂಡಿದೆ? **8**

ಅಥವಾ

(೨) 'ಕರುಣೆ ಒಲುಮೆಗೆ ಸಾಟಿಯೆ' – 'ನನ್ನ ನಾಯಿ' ಕವನದ ಹಿನ್ನೆಲೆಯಲ್ಲಿ ವಿಶ್ಲೇಷಿಸಿ.

5. ಆಧುನಿಕತೆಯ ಪ್ರವೇಶದಿಂದ ಗ್ರಾಮೀಣ ಪ್ರದೇಶದಲ್ಲುಂಟಾದ ಸ್ಥಿತ್ಯಂತರ 'ಅಬಚೂರಿನ ಪೋಸ್ಟಾಫೀಸು' ಕಥೆಯಲ್ಲಿ ಮೂಡಿ ಬಂದ ಬಗೆಯನ್ನು ವಿವರಿಸಿ. **10**

ಅಥವಾ

ಕಿವುಡ ತನಗೂ ಮನಸ್ಸು ಮತ್ತು ಕರುಳು ಇದೆ ಎಂದು ಸಾದರಪಡಿಸುವ ಬಗೆಯನ್ನು ವಿಶ್ಲೇಷಿಸಿ.

6. (೧) ದೆವ್ವಗಳು ಇಲ್ಲ ಎನ್ನುವುದನ್ನು ವೈಜ್ಞಾನಿಕವಾಗಿ ಡಾ. ಕೋವೂರ್ ತೋರಿಸಿಕೊಟ್ಟ ಬಗೆ ವಿವರಿಸಿ. **10**

ಅಥವಾ

(೨) 'ಹರಕೆಗಳು ಕಷ್ಟ ಕಾಲಕ್ಕೆ ಈಜು ಬುರುಡೆಗಳಾಗಿ ಸಹಾಯಕ್ಕೆ ಬರುತ್ತವೆ' – ಈ ಹೇಳಿಕೆಯನ್ನು 'ಹರಕೆಗಳು' ಪ್ರಬಂಧದ ಹಿನ್ನೆಲೆಯಲ್ಲಿ ವಿಶ್ಲೇಷಿಸಿ.

7. (ಅ) ವಾಣಿಜ್ಯ ಭಾಷೆ ಎಂದರೇನು? **2**

(ಆ) ವಾಣಿಜ್ಯ ಪತ್ರದ ವಿವಿಧ ಅಂಗಗಳನ್ನು ಹೆಸರಿಸಿ. **3**

8. (ಅ) ಉದ್ಯೋಗ ಜಾಹೀರಾತು ಎಂದರೇನು? **2**

(ಆ) ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು – ಈ ಗಾದೆ ಮಾತನ್ನು ವಿಸ್ತರಿಸಿ. **3**

9. ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ. (**80** ಅಂಕಗಳ ಸ್ಕೀಂನವರಿಗೆ **ಕಡ್ಡಾಯ** ಪ್ರಶ್ನೆ) : **10**

(ಅ) ಚಿಲಿಪಿಲಿ ಗಾನಕ್ಕೆ ಬೆಲೆ ಕೊಡಬೇಕಾದುದು ಏಕೆ? ವಿವರಿಸಿ.

(ಆ) ಕನ್ನಡ ಸಂಸ್ಕೃತಿ ಬಗೆಗೆ ನಾವು ಹೆಮ್ಮೆ ಪಡಬೇಕಾದುದು ಏಕೆ? ವಿವರಿಸಿ.

---